sdmimd

## Andolana

Date: 11-08-2020 Page No: 2

Edition: Mysore Language: Kannada

# ‘ಎಸ್‌ಡಿಎಮ್‌ಐಎಮ್‌ಡಿ-25’ ಪುಸ್ತಕ ಬಿಡುಗಡೆ

ಮೈಸೂರು: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್ಮೆಂಟ್ ಡೆವಲಪ್‌ಮೆಂಟ್ (ಎಸ್‌ಡಿಎಂಐಎಂಡಿ) ಸಂಸ್ಥೆಯು 25 ವರ್ಷ ಪೂರೈಸಿದ ಸಂಭ್ರಮಾಚರಣೆ ಅಂಗವಾಗಿ ಸಂಸ್ಥೆ ನಡೆದು ಬಂದ ಹಾದಿಯನ್ನು ನೆನಪಿಸುವ ‘ಎಸ್‌ಡಿಎಂಐಎಂಡಿ-25 ವರ್ಷಗಳಿಂದ ಬದ್ಧತೆಗೆ ನೀಡಿದ ಗೌರವ’ ಪುಸ್ತಕವನ್ನು ಈಚೆಗೆ ಲೋಕಾರ್ಪಣೆಗೊಳಿಸಿತು.

ಧರ್ಮಸ್ಥಳ ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗಡೆ ಪುಸ್ತಕ ಲೋಕಾರ್ಪಣೆಗೊಳಿಸಿದರು. ಬಳಿಕ ಮಾತನಾಡಿದ ಅವರು, ಎಸ್‌ಡಿಎಂಐಎಂಡಿ ಸಂಸ್ಥೆಯು ಬಿ-ಶಾಲೆಗಳ ಸಮೀಕ್ಷೆಗಳಲ್ಲಿ ಅತ್ಯುತ್ತಮ 100 ಶಾಲೆಗಳ ಪೈಕಿ ಉತ್ತಮ ಸ್ಥಾನ ಗಳಿಸಿದೆ. ಅಲ್ಲದೆ, ಸಂಸ್ಥೆ ನಡೆಸಿದ ಪಿಜಿಡಿಎಂ ಕಾರ್ಯಕ್ರಮಕ್ಕೆ ಯುರೋಪ್‌ನ ಯುರೋಪಿಯನ್ ಫೌಂಡೇಶನ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್‌ನಿಂದ ಹಾಗೂ ಅಮೆರಿಕದ ಅಕ್ರೆಡಿಟೇಶನ್ ಕೌನ್ಸಿಲ್ ಫಾರ್ ಬ್ಯುಸಿನೆಸ್ ಸ್ಕೂಲ್ ಅಂಡ್ ಪ್ರೊಗ್ರಾಮ್ಸ್‌ಗಳಿಂದ ಮಾನ್ಯತೆ ಗಳಿಸಿಕೊಂಡಿದೆ ಎಂದರು.



Release of the book SDMIMD-25